# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 320 |
| ಸದಸ್ಯರ ಹೆಸರು | : | ಶ್ರೀ ವೈ. ಎಂ.ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ಸಚಿವರು | : | ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು. |
| ಉತ್ತರಿಸುವ ದಿನಾಂಕ | : | 07.07.2023 |

<table>
<tr><th>ಕ್ರಮ ಸಂಖ್ಯೆ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಬಳ್ಳಾರಿ ಜಿಲ್ಲೆಯಲ್ಲಿರುವ ಒಟ್ಟು ಅಂಗನವಾಡಿ ಕೇಂದ್ರಗಳ ಸಂಖ್ಯೆ ಎಷ್ಟು; ಇವುಗಳಲ್ಲಿ ಸ್ವಂತ ಕಟ್ಟಡಗಳಲ್ಲಿ ನಡೆಯುತ್ತಿರುವ ಕೇಂದ್ರಗಳೆಷ್ಟು; ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕೇಂದ್ರಗಳೆಷ್ಟು; ಈ ಬಾಡಿಗೆ ಕಟ್ಟಡಗಳ ಬದಲು ಸರ್ಕಾರದ ಸ್ವಂತ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುವಂತಾಗಲು ಸರ್ಕಾರದ ಕ್ರಮವೇನು; (ವಿವರ ನೀಡುವುದು)</td><td>
ಬಳ್ಳಾರಿ ಜಿಲ್ಲೆಯಲ್ಲಿರುವ ಅಂಗನವಾಡಿ ಕೇಂದ್ರಗಳ ವಿವರ ಈ ಕೆಳಕಂಡಂತಿದೆ:
<table>
<tr><td>ಸ್ವಂತ ಕಟ್ಟಡ</td><td>933</td></tr>
<tr><td>ಪಂಚಾಯಿತಿ ಕಟ್ಟಡ</td><td>3</td></tr>
<tr><td>ಸಮುದಾಯ ಭವನ</td><td>14</td></tr>
<tr><td>ಶಾಲಾ ಆವರಣ</td><td>43</td></tr>
<tr><td>ಬಾಡಿಗೆ ಕಟ್ಟಡ</td><td>268</td></tr>
<tr><td>ಮಹಿಳಾ ಮಂಡಲ</td><td>1</td></tr>
<tr><td>ಇತರೆ ಕಟ್ಟಡ</td><td>4</td></tr>
<tr><td>ಒಟ್ಟು</td><td>1266</td></tr>
</table>
ಒಟ್ಟು 268 ಬಾಡಿಗೆ ಕಟ್ಟಡಗಳ ಪೈಕಿ 59 ವಿವಿಧ ಯೋಜನೆಯಡಿ ಮಂಜೂರಾಗಿ 28 ಕಟ್ಟಡಗಳ ಕಾಮಗಾರಿಗಳು ಪ್ರಗತಿಯಲ್ಲಿದ್ದು, 31 ಕಾಮಗಾರಿಗಳು ಪ್ರಾರಂಭಿಸಬೇಕಾಗಿದೆ. (ಮಾಹಿತಿ ಅನುಬಂಧದಲ್ಲಿ ಒದಗಿಸಿದೆ)
ಉಳಿದ 209 ಬಾಡಿಗೆ ಕಟ್ಟಡಗಳಲ್ಲಿ 92 ಕಟ್ಟಡಗಳಿಗೆ ನಿವೇಶನ ಲಭ್ಯವಿದ್ದು ಕೆ.ಎಂ.ಇ.ಆರ್.ಸಿ ಯೋಜನೆಯಡಿ ಕಟ್ಟಡ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗುತ್ತಿದೆ. ಬಾಕಿಯಿರುವ 117 ಕಟ್ಟಡಗಳಿಗೆ ನಿವೇಶನ ಲಭ್ಯತೆ ಹಾಗೂ ಅನುದಾನ ಲಭ್ಯತೆಗೆ ಅನುಗುಣವಾಗಿ ಹಂತ ಹಂತವಾಗಿ ಸ್ವಂತ ಕಟ್ಟಡ ನಿರ್ಮಿಸಲು ಕ್ರಮವಹಿಸಲಾಗುವುದು.
</td></tr>
<tr><td>ಆ)</td><td>ಈ ಬಾಡಿಗೆ ಕಟ್ಟಡಗಳಿಗೆ ನೀಡಲು ಬಾಕಿ ಇರುವ ಹಣವೆಷ್ಟು; ಯಾವ ಕಾಲಮಿತಿಯಲ್ಲಿ ಹಣವನ್ನು ಮಂಜೂರು ಮಾಡಿ ವಿತರಿಸಲಾಗುವುದು;</td><td>
ಬಾಡಿಗೆ ಕಟ್ಟಡಗಳಿಗೆ ನೀಡಲು ಬಾಕಿ ಇರುವ ಹಣದ ವಿವರ ಈ ಕೆಳಕಂಡಂತಿದೆ:
<table>
<tr><th>ಯೋಜನೆಯ ಹೆಸರು</th><th>ಬಾಕಿ ಇರುವ ಬಾಡಿಗೆ ಹಣ (ರೂ.ಗಳಲ್ಲಿ)</th></tr>
<tr><td>ಬಳ್ಳಾರಿ(ನ)</td><td>50,52,000</td></tr>
<tr><td>ಬಳ್ಳಾರಿ(ಗ್ರಾ)</td><td>6,47,000</td></tr>
<tr><td>ಸಂಡೂರು</td><td>1,64,000</td></tr>
<tr><td>ಸಿರಗುಪ್ಪ(ಕಂಪ್ಲಿ)</td><td>11,51,050</td></tr>
<tr><td>ಒಟ್ಟು</td><td>70,14,050</td></tr>
</table>
ಅನುದಾನ ಲಭ್ಯತೆ ಆಧಾರದ ಮೇಲೆ ಹಂತ ಹಂತವಾಗಿ ಬಾಡಿಗೆ ಹಣ ಪಾವತಿಸಲಾಗುವುದು.
</td></tr>
<tr><td></td><td></td><td></td></tr>
</table>

| | | |
|---|---|---|
| ಇ) | ರಾಜ್ಯದಲ್ಲಿ ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಕಚೇರಿಗಳು ಮತ್ತು ಅಂಗನವಾಡಿ ಕೇಂದ್ರಗಳನ್ನು ಸ್ವಂತ ಕಟ್ಟಡಗಳಲ್ಲಿ ಅಥವಾ ಸರ್ಕಾರದ ಕಟ್ಟಡಗಳಿಗೆ ತರಲು ಸರ್ಕಾರದ ನಿರ್ಧಾರಗಳೇನು; ಯಾವ ಕಾಲಮಿತಿಯಲ್ಲಿ ಕ್ರಮ ಕೈಗೊಳ್ಳಲಾಗುವುದು? (ವಿವರ ನೀಡುವುದು) | ರಾಜ್ಯದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಡಿ ಉಪನಿರ್ದೇಶಕರ/ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿಗಳು ಸ್ತ್ರೀಶಕ್ತಿ ಭವನ, ಮಿನಿ ವಿಧಾನಸೌಧ ಆವರಣದಲ್ಲಿ ಮತ್ತು ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ಕೆಲವೊಂದು ಕಛೇರಿಗಳಿಗೆ ತಾಲ್ಲೂಕು ಪಂಚಾಯತಿ ಪುರಸಭೆ ಇತ್ಯಾದಿ ಮೂಲಗಳಿಂದ ನಿವೇಶನಗಳನ್ನು ಒದಗಿಸಿಕೊಳ್ಳಲಾಗುತ್ತಿದ್ದು ಇವುಗಳಿಗೆ ಕಟ್ಟಡಗಳನ್ನು ನಿರ್ಮಿಸಲು ಇಲಾಖೆಯಲ್ಲಿ ಪ್ರತ್ಯೇಕ ಲೆಕ್ಕ ಶೀರ್ಷಿಕೆಯಾಗಲೀ ಅನುದಾನವನ್ನಾಗಲೀ ಇಲಾಖೆಗೆ ನಿಗಧಿಪಡಿಸಿರುವುದಿಲ್ಲ.<br><br>ಅಂಗನವಾಡಿ ಕೇಂದ್ರಗಳಿಗೆ ನಿವೇಶನ ಲಭ್ಯತೆ ಹಾಗೂ ಅನುದಾನ ಲಭ್ಯತೆಗೆ ಅನುಗುಣವಾಗಿ ಹಂತ ಹಂತವಾಗಿ ಸ್ವಂತ ಕಟ್ಟಡ ನಿರ್ಮಿಸಲು ಕ್ರಮವಹಿಸಲಾಗುವುದು. |

**ಸಂಖ್ಯೆ:ಮಮಇ 119 ಐಸಿಡಿ 2023**

**(ಲಕ್ಷ್ಮಿ ಆರ್. ಹೆಬ್ಬಾಳ್ಕರ್)**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಹಾಗೂ ಹಿರಿಯ ನಾಗರಿಕರ
ಸಬಲೀಕರಣ ಸಚಿವರು.